



ಗುಂಡ ತನ್ನ ಅತ್ಯಾಧುನಿಕ ಮೊಬೈಲಿನಲ್ಲಿ ವಾಯ್ಸ್ ರೆಕಗ್ನೈಸ್ ಪಾಸ್‌ವರ್ಡ್ ಸೆಟ್ ಮಾಡ್ತಿದ್ದ. ಇನ್ನೇನು ಪಾಸ್‌ವರ್ಡ್ ಸೆಟ್ಟಿಂಗ್ ಮುಗಿಯಿತು ಅನ್ನುವಷ್ಟರಲ್ಲಿ ಅಚಾನಕ್ ಆಗಿ ಎಲ್ಲಿಂದಲೋ ಓಡಿ ಬಂದ ನಾಯಿ ಜೋರಾಗಿ ಬೊಗಳಿ ಓಟಕಿತ್ತಿತು. ಅದೇ ವೇಳೆ ಗುಂಡನ ವಾಯ್ಸ್ ಹಾಗೂ ನಾಯಿ ಬೊಗಳುವ ಶಬ್ದ ಪಾಸ್‌ವರ್ಡ್ ಆಗಿ ಸೆಟ್ ಆಯಿತು. ಆಗಿನಿಂದಲೂ ಮೊಬೈಲ್ ಓಪನ್ ಮಾಡುವ ಸಲುವಾಗಿ ಗುಂಡ ಆ ನಾಯಿಯ ಹುಡುಕಾಟದಲ್ಲಿದ್ದಾನೆ!

ಸಂದರ್ಶಕ: ನಿಮಗೆ ನಿಮ್ಮ ಪತ್ನಿ ಅಥವಾ ನಿಮ್ಮ ತಂಗಿ, ಇವರಿಬ್ಬರಲ್ಲಿ ಯಾರು ಹೆಚ್ಚು ಇಷ್ಟ?
ಗುಂಡ(ಉತ್ಸುಕನಾಗಿ): ಪತ್ನಿಯ ತಂಗಿ!

★★★

ಪೆಟ್ರೋಲ್ ಹಾಕಿಸಲು ಪೆಟ್ರೋಲ್ ಬಂಕಿಗೆ ಬರುವ ಬಹುತೇಕ ಪುರುಷರು ತಮ್ಮ ಪತ್ನಿಯರನ್ನು ಬಂಕಿನ ಹೊರಗಡೆಯೇ ವಾಹನದಿಂದ ಇಳಿಸುವುದನ್ನು ಗಮನಿಸಿದ್ದ ಗುಂಡನಿಗೆ ಯಾಕೆ ಹೀಗೆ ಎಂದು ಆಶ್ಚರ್ಯವಾಯಿತು. ಆಗಲೇ ಎದುರಿಗೆ ಹಾಕಿದ್ದ ಸೂಚನಾಫಲಕವೊಂದರಲ್ಲಿ ಬರೆದಿರುವುದನ್ನು ಓದಿ ಉತ್ತರ ದೊರೆತವನಂತೆ ಮನಸಾರೆ ನಕ್ಕ. 'ಬೆಂಕಿ ಹಚ್ಚುವ ಯಾವುದೇ ವಸ್ತುವನ್ನು ಪೆಟ್ರೋಲ್ ಪಂಪ್‌ನಿಂದ ದೂರವಿಡಿ'.

★★★

ಮರಿ ಗುಂಡ: ಸಂಸ್ಕೃತದಲ್ಲಿ ಹೆಂಡತಿಗೆ ಏನಂತಾರೆ ಅಪ್ಪ?

ಗುಂಡ: ಸಂಸ್ಕೃತದಲ್ಲಿ ಮಾತ್ರವಲ್ಲ, ಇತರ ಯಾವ ಭಾಷೆಯಲ್ಲೂ ಹೆಂಡತಿಗೆ ಏನೂ ಅನ್ನಲು ಸಾಧ್ಯವಿಲ್ಲ ಕಣೋ!

★★★

ಪ್ರವಚನವೊಂದರಲ್ಲಿ ಸ್ವಾಮೀಜಿ ಹೇಳುತ್ತಿದ್ದರು, 'ಓಂ' ಶಬ್ದದ ಉಚ್ಚಾರದಿಂದ ಮೆದುಳಿನ ಕೆಲವು ನರಗಳು ಜಾಗೃತಗೊಳ್ಳುತ್ತವೆ...' ಇದನ್ನಾಲಿಸಿದ ವಿವಾಹಿತ ಗುಂಡ ಸ್ವಗತದಲ್ಲಿ ಅಂದುಕೊಂಡ, 'ಪಾಪ, ಈ ಬ್ರಹ್ಮಚಾರಿ ಸ್ವಾಮೀಜಿಗೇನು ಗೊತ್ತು...? ಹೆಂಡತಿ ಒಮ್ಮೆ 'ಓ' ಎಂದರೆ ಸಾಕು ಗಂಡನ ಸಂಪೂರ್ಣ ಮೆದುಳೇ ಜಾಗೃತವಾಗಿ ಸೆಟೆದುಕೊಳ್ಳುತ್ತದೆ'!

★★★

ಸಂದರ್ಶಕ: ನೀವು ಸದಾ ಪ್ರಸನ್ನರಾಗಿದ್ದು ಶಾಂತ ಸ್ವಭಾವವನ್ನು ಹೊಂದಿರುತ್ತೀರಿ; ಇದರ ರಹಸ್ಯವೇನು?
ಗುಂಡ: ನಾನು ವೇದವಾಕ್ಯವನ್ನು ಚಾಚೂ ತಪ್ಪದೆ ಪರಿಪಾಲಿಸುತ್ತೇನೆ.
ಸಂದರ್ಶಕ: ನಾಲ್ಕು ವೇದಗಳಿವೆ, ನೀವು ಯಾವುದನ್ನು ಅನುಸರಿಸುತ್ತೀರಿ?
ಗುಂಡ: ನನ್ನ ಪತ್ನಿಯ ಹೆಸರು ವೇದ. ಅವಳ ನಿರ್ದೇಶನದಂತೆ ನಾನು ನಡೆಯುತ್ತೇನೆ!

★★★

ಟಿವಿಯಲ್ಲಿ ನೇರ ಸಂದರ್ಶನದ ವೇಳೆ ಗುರೂಜಿಯ ಸಂಗಡ ವೀಕ್ಷಕರಿಂದ ಕೇಳಲಾಗುವ ಎರಡು ವಿಧದ ಪ್ರಶ್ನೆಗಳು...
* ಗುರೂಜಿ, ಮದುವೆ ಸೆಟ್ ಆಗ್ತಿಲ್ಲ, ಏನ್ಮಾಡ್ಲಿ?
* ಗುರೂಜಿ, ಮದುವೆ ಆಯ್ತು ಆದರೆ ಸೆಟ್ ಆಗ್ತಿಲ್ಲ, ಏನ್ಮಾಡ್ಲಿ?!

★★★

ಮರಿಗುಂಡನಿಗೆ ಮನೆಪಾಠ ಹೇಳಿಕೊಡುತ್ತಾ ಸ್ವಯಂ ಸುಸ್ತಾಗಿ ಹೋದ ಶ್ರೀಮತಿ ಗುಂಡ ಹತಾಶ ಸ್ವರದಲ್ಲಿ ಉಲಿದಳು, 'ನಿನಗೆ ಹೋಂ ವರ್ಕ್ ಮಾಡಿಸಲು ನಾನು ಪಡುವ ಶ್ರಮದ ಅರ್ಧದಷ್ಟನ್ನಾದರೂ ನನ್ನ ವಿದ್ಯಾರ್ಥಿ ಜೀವನದಲ್ಲಿ ಪಡುತ್ತಿದ್ದರೆ ಈ ಮನೆಗಿಂತ ಎಷ್ಟೋ ಚೆನ್ನಾಗಿರುವ ಮನೆ ಸೇರುತ್ತಿದ್ದೆ'!

★★★

ನವ ವಿವಾಹಿತ ಪುರುಷರಿಗೆ ಅನುಭವಿ ಗುಂಡನ ಹಿತವಚನ, 'ಮೊಬೈಲ್‌ನಲ್ಲಿ ನಿಮ್ಮ ಪತ್ನಿ ನಿಮ್ಮ ಭಾವಚಿತ್ರವನ್ನು ವಾಟ್ಸ್ಆ್ಯಪ್ ಡಿಪಿಗೋ ಅಥವಾ ಫೇಸ್‌ಬುಕ್ ಪ್ರೊಫೈಲ್‌ನಲ್ಲಿ ಹಾಕಿದ್ದರೆ ನೀವೇನೋ ಆಕೆಗೆ ಭಾರೀ ಸ್ಪೆಷಲ್ ವ್ಯಕ್ತಿ ಅನ್ನುವ ರೀತಿ ಬೀಗುವ ಅವಶ್ಯಕತೆಯಿಲ್ಲ... ಏಕೆಂದರೆ ಬೇಗಾನ್ ಸ್ಪ್ರೇಯ ಕ್ಯಾನಿನ ಮೇಲೆಯೂ ಜಿರಲೆಯ ಫೋಟೊ ಹಾಕಿಸಲಾಗಿರುತ್ತದೆ!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

